



# ಕಾರಿನ ತೂಕದ ಕುಂಬಳಕಾಯಿ!

**ಮಾ**ರುತಿ-800 ಕಾರಿನ ತೂಕ 650 ಕೆ.ಜಿ. ಈ ಕುಂಬಳಕಾಯಿಯ ತೂಕ 750 ಕೆ.ಜಿ! ಇದು ಕಲ್ಪನೆಯಲ್ಲ- ವಾಸ್ತವ ಸಂಗತಿ. ಚಿತ್ರದಲ್ಲಿರುವ ಕುಂಬಳಕಾಯಿ ಕಳೆದ 6 ವಾರಗಳಿಂದ ಬೆಳೆಯುತ್ತಲೇ ಇದೆ. ಪ್ರತಿದಿನ 12 ರಿಂದ 13 ಕಿಲೋ ಅದರ ತೂಕ ಹೆಚ್ಚುತ್ತಿದೆ. ಈಗ ಅದರ ತೂಕ 1,652 ಪೌಂಡ್. ಅದರ ತೂಕ 1,725 ಪೌಂಡ್ ದಾಟಿದರೆ ಅದು ಜಗತ್ತಿನಲ್ಲಿಯೇ ಅತಿ ದೊಡ್ಡ ಕುಂಬಳ ಎಂಬ ಖ್ಯಾತಿಗೆ ಪಾತ್ರವಾಗುತ್ತದೆ. 17 ಅಡಿ ಸುತ್ತಳತೆ ಪಡೆದ ಈ ಕುಂಬಳಕಾಯಿ ಈಗ ಯೂರೋಪ್ ಖಂಡದ ಅತಿ ದೊಡ್ಡ ಕುಂಬಳಕಾಯಿ ಎಂಬ ಪಟ್ಟವನ್ನು ಪಡೆದಿದೆ.

49 ವರ್ಷದ ಇಯಾನ್ ಹಾಗು ಸ್ಟುವರ್ಟ್ ಪ್ಯಾಟನ್ ಎಂಬ ಅವಳಿ ಸಹೋದರರು ಈ ಕುಂಬಳಕಾಯಿಯನ್ನು ಅತ್ಯಂತ ಮುತುವರ್ಜಿಯಿಂದ ಬೆಳೆಸುತ್ತಿದ್ದಾರೆ. ಲೆಮಿಂಗ್ಟನ್ ಹ್ಯಾಂಪ್‌ಶೈರ್‌ನಲ್ಲಿರುವ ತೋಟದಲ್ಲಿ ಕಳೆದ 30 ವರ್ಷಗಳಿಂದ ಅವರು ಕೃಷಿ ಮಾಡುತ್ತಿದ್ದಾರೆ. ವಿಶ್ವದ ಅತಿ ದೊಡ್ಡ ಕುಂಬಳಕಾಯಿಯನ್ನು ಬೆಳೆಸುವುದೇ ಅವರ ಗುರಿ. ಈ ವರ್ಷ ಅದು ಅವರಿಗೆ ಸಾಧ್ಯವಾಗದಿದ್ದರೂ ಅವರು ಕೈಚೆಲ್ಲುವುದಿಲ್ಲವಂತೆ. ಮುಂದೊಂದು ದಿನ ಆ ಕಾರ್ಯವನ್ನು ಮಾಡಿಯೇ ತೀರುತ್ತೇವೆ ಎನ್ನುವ ಛಲ ಅವರದು. ಪ್ರತಿ ವರ್ಷ ಅವರು ಕುಂಬಳಕಾಯಿಯನ್ನೇ ಬೆಳೆಯುತ್ತಾರೆ. ಅದನ್ನು ಅತಿ ದೊಡ್ಡದಾಗಿ ಬೆಳೆಸುವ ವಿವಿಧ ತಂತ್ರಗಳನ್ನು ಅವರು ಕಲಿತು ಬಳಸುತ್ತಾರೆ. ಸುಧಾರಿತ ತಳಿಗಳನ್ನು ಸಂಕರಣ ಮಾಡಿದ್ದಾರೆ. ದೊಡ್ಡ ಹಣ್ಣು ಬಿಡುವ ಕುಂಬಳ ಬಳ್ಳಿಗಳ ಕಸಿ ಕಟ್ಟಿದ್ದಾರೆ. ಈ ಸಹೋದರರ ಉತ್ಸಾಹಕ್ಕೆ ಮಿತಿಯೇ ಇಲ್ಲ.

■ ಸುಭಾಸ ಯಾದವಾಡ